# ಭೂ ಒತ್ತುವರಿ ಇತ್ಯರ್ಥಕ್ಕೆ ಹೊಸ ಸಮಿತಿ

## ರಾಮಸ್ವಾಮಿ ಸಮಿತಿ ಮಾದರಿಯಲ್ಲಿಯೇ ಬೋಪಯ್ಯ ಸಮಿತಿ

**ಬೆಂಗಳೂರು:** ಸರಕಾರಿ ಭೂಮಿ ಒತ್ತುವರಿ ಪ್ರಕರಣ ಇತ್ಯರ್ಥಕ್ಕೆ ಈ ಹಿಂದೆ ಎ.ಟಿ.ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸಿದ್ದ ಸಮಿತಿ ಮಾದರಿಯಲ್ಲಿ ಮತ್ತೊಂದು ಸಮಿತಿಯನ್ನು ಸರಕಾರ ರಚಿಸಿದೆ.

ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸರಕಾರಿ ಭೂಮಿ ಒತ್ತುವರಿ ತೆರವು ಸಂಬಂಧ ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಬಿಜೆಪಿ ಸರಕಾರದ ಅವಧಿಯಲ್ಲಿ ಸಮಿತಿ ರಚನೆಯಾಗಿತ್ತು. ರಾಮಸ್ವಾಮಿ ಸಮಿತಿ ವರದಿ ಜಾರಿಗೆ ನಂತರ ಬಂದ ಸರಕಾರಗಳ ಅವಧಿಯಲ್ಲಿ ಪರಿಣಾಮಕಾರಿ ಕ್ರಮ ಆಗಿಲ್ಲ. ಈಗ ಹಾಲಿ ಬಿಜೆಪಿ ಸರಕಾರ ಇದೇ ಉದ್ದೇಶಕ್ಕೆ ಮತ್ತೊಂದು ಸಮಿತಿ ರಚಿಸಲು ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಂಡಿದೆ. ಈ ಸಮಿತಿಯಲ್ಲಿ ರಾಮಸ್ವಾಮಿ ಅವರನ್ನು ಸದಸ್ಯರಾಗಿ ಸೇರಿಸಿಕೊಳ್ಳಲಾಗಿದ್ದು, ಸಮಿತಿ ಅಧ್ಯಕ್ಷರಾಗಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಕಾರ್ಯ ನಿರ್ವಹಿಸಲಿದ್ದಾರೆ.

ಸಮಿತಿ ರಚನೆ ಸಂಬಂಧ ಶೀಘ್ರದಲ್ಲೇ ಅಧಿಕೃತ ಅಧಿಸೂಚನೆ ಹೊರಡಿಸಲಾಗುವುದು. ಬೋಪಯ್ಯ ಅಧ್ಯಕ್ಷತೆಯ ಸಮಿತಿಯಲ್ಲಿ ಶಾಸಕರಾದ ಅರಗ ಜ್ಞಾನೇಂದ್ರ, ಎಸ್.ಆರ್. ವಿಶ್ವನಾಥ್, ಎ.ಟಿ.ರಾಮಸ್ವಾಮಿ, ರಾಜಶೇಖರ ಪಾಟೀಲ್, ರಾಜೂಗೌಡ ಸದಸ್ಯರಾಗಿರುತ್ತಾರೆ ಎಂದು ಸಂಪುಟ ಸಭೆ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

**ಆಶಾ ಕಾರ್ಯಕರ್ತೆಯರಿಗೆ 3 ಸಾವಿರ ರೂ.:** ರಾಜ್ಯದ 41,628 ಆಶಾ ಕಾರ್ಯಕರ್ತೆಯರಿಗೆ ಏಕ ಕಂತಿನಲ್ಲಿ ಒಂದು ಬಾರಿಗೆ ಅನ್ವಯವಾಗುವಂತೆ ತಲಾ 3 ಸಾವಿರ ರೂ. ಪ್ರೋತ್ಸಾಹ ಧನ ಬಿಡುಗಡೆ ಮಾಡಲಾಗುವುದು. ಈ ಉದ್ದೇಶಕ್ಕೆ 12.48 ಕೋಟಿ ರೂ. ಒದಗಿಸಲಾಗುತ್ತಿದೆ ಎಂದರು.



ಸಂಪುಟದ ನಿರ್ಧಾರಗಳನ್ನು ಸಚಿವರಾದ ಮಾಧುಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಮಾಧ್ಯಮಗಳಿಗೆ ವಿವರಿಸಿದರು.

### ಕಾರಾಗೃಹ ಭದ್ರತೆಗೆ ಕ್ರಮ

ಬೆಂಗಳೂರು ಕಾರಾಗೃಹವನ್ನು ಭದ್ರತಾ ದೃಷ್ಟಿಯಿಂದ ಇನ್ನಷ್ಟು ಸುಸಜ್ಜಿತಗೊಳಿಸಲು 100 ಕೋಟಿ ರೂ. ನೀಡಲಾಗುತ್ತಿದೆ. ವಿಜಯಪುರದ ಕಾರಾಗೃಹವನ್ನು ಭದ್ರಪಡಿಸಲು 99.98 ಕೋಟಿ ರೂ. ನೀಡಲು ಅನುಮೋದಿಸಲಾಗಿದೆ ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

### ಸಂಪುಟದ ಪ್ರಮುಖ ನಿರ್ಧಾರಗಳು

- ಪೀಣ್ಯ ಕೈಗಾರಿಕೆ ಪ್ರದೇಶದ ಮೂಲಸೌಕರ್ಯಕ್ಕೆ 50 ಕೋಟಿ ರೂ.
- ಹುಬ್ಬಳ್ಳಿಯ ಎಂಟಸಾಗರ ಕೈಗಾರಿಕೆ ಮೂಲಸೌಕರ್ಯಕ್ಕೆ 18.50 ಕೋಟಿ
- ಅಕ್ರಮ ಗಣಿಗಾರಿಕೆ ಕುರಿತ ತನಿಖೆಗೆ ಎಸ್‌ಐಟಿ ಅವಧಿ 1 ವರ್ಷ ವಿಸ್ತರಣೆ
- 30 ಜಿಲ್ಲೆಗಳಲ್ಲಿ ಸ್ಟ್ರಾಂಗ್ ರೂಂ ನಿರ್ಮಿಸಲು 123 ಕೋಟಿ ರೂ.
- ಶಾಲೆಗಳಲ್ಲಿ ಜಂತುಹುಳ ರೋಗ ತಡೆಯಲು 5.92 ಕೋಟಿ ರೂ.
- ಕಲಬುರ್ಗಿಯಲ್ಲಿ ಜಯದೇವ ಸಂಸ್ಥೆಯ ಘಟಕಕ್ಕೆ 150 ಕೋಟಿ ರೂ.
- ಹೇಮಾವತಿಯ 70 ಕಿ.ಮೀ. ವರೆಗೆ ನಾಲೆ ವಿಸ್ತರಣೆಗೆ 175 ಕೋಟಿ ರೂ.
- ಹಾವೇರಿಯ ಹೊಸ ಮೆಡಿಕಲ್ ಕಾಲೇಜಿಗೆ 478.75 ಕೋಟಿ ರೂ.
- ಕಾರವಾರ ಆಸ್ಪತ್ರೆಯನ್ನು 300ರಿಂದ 750 ಹಾಸಿಗೆ ಸಾಮರ್ಥ್ಯಕ್ಕೆ ಏರಿಕೆ
- ಮೈಸೂರಿನ ಪಿಕೆಟಿಬಿ ಸಂಸ್ಥೆ ಜಾಗದಲ್ಲಿ ಹೆಣ್ಣು ಮಕ್ಕಳ ಹಾಸ್ಟೆಲ್‌ಗೆ ಸಮ್ಮತಿ
- ಚಿಕ್ಕಬಳ್ಳಾಪುರ ಮೆಡಿಕಲ್ ಕಾಲೇಜಿಗೆ 508 ಕೋಟಿ ರೂ. ಸಮ್ಮತಿ
- ಬೆಂಗಳೂರು ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ಆವರಣದಲ್ಲಿ 450 ಹಾಸಿಗೆ ಸಾಮರ್ಥ್ಯದ ಮತ್ತೊಂದು ಘಟಕ ನಿರ್ಮಿಸಲು 132.31 ಕೋಟಿ ರೂ.
- ಪಾಂಡವಪುರ, ಚುಂಚನಕಟ್ಟೆ ಸಕ್ಕರೆ ಕಾರ್ಖಾನೆ ಖಾಸಗಿಗೆ ಗುತ್ತಿಗೆ
- ಜಿಲ್ಲಾ ಯೋಜನಾ ಸಮಿತಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರೇ ಅಧ್ಯಕ್ಷರು